ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೧

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**ಸೋಮವಾರ, ದಿನಾಂಕ: ೧೩ನೇ ಜುಲೈ, ೨೦೧೫**

---

**ಸಮೂಹ – I**

೧. ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು

೨. ಸಾರಿಗೆ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

೪. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

೫. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು

೬. ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು

---

**ಟ್ಯಾಕ್ಸಿ, ಕ್ಯಾಬ್ ಏಜೆನ್ಸಿಯವರು ನಿಯಮ ಉಲ್ಲಂಘಿಸಿರುವ ಪ್ರಕರಣಗಳು**

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೫೧ (೧೨೬೧) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದಲ್ಲಿ ಟ್ಯಾಕ್ಸಿ, ಕ್ಯಾಬ್ ಓಡಿಸಲು ಸರ್ಕಾರ ನಿಗದಿಪಡಿಸಿರುವ ನಿಯಮ ಹಾಗೂ ಮಾನದಂಡಗಳೇನು ; (ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಕಳೆದ ೨ ವರ್ಷಗಳಲ್ಲಿ ಯಾವ ಯಾವ ಟ್ಯಾಕ್ಸಿ ಕ್ಯಾಬ್‌ಗಳಿಗೆ ಅನುಮತಿ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಟ್ಯಾಕ್ಸಿ, ಕ್ಯಾಬ್ ಸಂಸ್ಥೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಬಂದಿರುವ ಆದಾಯದ ಮೊತ್ತವೆಷ್ಟು ; (ವರ್ಷವಾರು, ಏಜೆನ್ಸಿಗಳವಾರು ಮಾಹಿತಿ ನೀಡುವುದು)

(ಈ) ಅನುಮತಿ ಪಡೆದ ಟ್ಯಾಕ್ಸಿ, ಕ್ಯಾಬ್ ಏಜೆನ್ಸಿಯವರು ಸರ್ಕಾರದ ನಿಯಮ ಉಲ್ಲಂಘಿಸಿರುವ ಪ್ರಕರಣಗಳಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು)

## ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೧೫೨ (೧೫೬೨) ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳ ಸಂಖ್ಯೆ ಎಷ್ಟು ; (ಕಾಲೇಜುವಾರು ಹಾಗೂ ವಿಷಯವಾರು ವಿವರ ನೀಡುವುದು)

(ಇ) ಸದರಿ ಕಾಲೇಜುಗಳಲ್ಲಿ ಖಾಲಿ ಇರುವ ಶುಶ್ರೂಷಕರುಗಳ ಹುದ್ದೆಗಳೆಷ್ಟು ; (ಕಾಲೇಜುಗಳವಾರು ವಿವರ ನೀಡುವುದು)

(ಈ) ಸದರಿ ಕಾಲೇಜುಗಳಲ್ಲಿ ಖಾಲಿ ಇರುವ ತಂತ್ರಜ್ಞರ ಹುದ್ದೆಗಳು (ಲ್ಯಾಬ್ ಟೆಕ್ನಿಷಿಯನ್ಸ್) ಸಂಖ್ಯೆ ಎಷ್ಟು ; (ಕಾಲೇಜುವಾರು ಹಾಗೂ ವಿಭಾಗವಾರು ವಿವರ ನಿಡುವುದು)

(ಉ) ಸದರಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಶುಶ್ರೂಷಕರು ಹಾಗೂ ತಂತ್ರಜ್ಞರ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿದೆಯೇ ; (ಕಾಲೇಜುವಾರು, ವಿಭಾಗವಾರು ಪೂರ್ಣ ವಿವರ ನೀಡುವುದು)

(ಉ) ಸದರಿ ಖಾಲಿ ಇರುವ ಬೋಧಕರು, ಶುಶ್ರೂಷಕರು, ತಂತ್ರಜ್ಞರುಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು ?

## ಸೊಳ್ಳೆ ಕಡಿತದಿಂದ ಉಂಟಾಗಬಹುದಾದ ರೋಗಗಳನ್ನು ತಡೆಗಟ್ಟುವ ಬಗ್ಗೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೫೩ (೧೨೫೪) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಡೆಂಗ್ಯೂ, ಮಲೇರಿಯಾ ಹಾಗೂ ಇನ್ನಿತರ ಸೊಳ್ಳೆ ಕಡಿತದಿಂದಾಗುವ ರೋಗಗಳಿಂದ ಮೃತಪಟ್ಟವರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬೆಳಗಾವಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಜಿಲ್ಲಾ ಕೇಂದ್ರಗಳಿಂದ ದೂರವಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಈ ರೋಗವನ್ನು ತಡೆಯಲು ಸರ್ಕಾರವು ತೆಗೆದುಕೊಂಡ ಮುನ್ನೆಚ್ಚರಿಕೆ ಕ್ರಮಗಳೇನು ? (ತಾಲ್ಲೂಕುವಾರು ವಿವರ ನೀಡುವುದು)

## ಶಾಸಕರ ನಿಧಿ ಬಳಕೆಯ ಬಗ್ಗೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) –**

೧೫೪ (೧೨೫೯) ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಕಾಮಗಾರಿಗೆ ಸಂಬಂಧಿಸಿದಂತೆ ಕಳೆದ ಐದು ವರ್ಷಗಳಲ್ಲಿ ಎಷ್ಟು ಉಪಯೋಗ ಪ್ರಮಾಣ ಪತ್ರ (Utilisation Certificate) ಪಡೆಯಲಾಗಿದೆ ; (ಶಾಸಕವಾರು ಐದು ವರ್ಷಗಳ ವಿವರ ನೀಡುವುದು)

(ಆ) ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಕಾಮಗಾರಿಗಳು ಪೂರ್ಣ ಪ್ರಮಾಣದಲ್ಲಿ ಉಪಯೋಗವಾಗದೇ ಇರಲು ಯಾವ ಪ್ರಮುಖ ಕಾರಣಗಳನ್ನು ಗುರುತಿಸಲಾಗಿದೆ ; ರಾಜ್ಯಾದ್ಯಾಂತ ರಸ್ತೆ, ಚರಂಡಿ, ಹೂಳೆತ್ತುವುದು ಮತ್ತು ಸಮುದಾಯ ಭವನ ಈ ನಾಲ್ಕು ಕಾಮಗಾರಿಗಳಿಗೆ ಕಳೆದ ಐದು ವರ್ಷಗಳಲ್ಲಿ ವೆಚ್ಚವಾಗಿರುವ ಪ್ರತಿಯೊಬ್ಬ ಶಾಸಕರ ವರ್ಷವಾರು ವಿವರ ನೀಡುವುದು ;

(ಇ) ಕಳೆದ ಐದು ವರ್ಷಗಳಲ್ಲಿ ಈ ಯೋಜನೆಯಲ್ಲಿ ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರ ಉಪಯೋಗದಲ್ಲಿರುವ ಸಮುದಾಯ ಭವನಗಳ ವಿವರ ನೀಡುವುದು ; ಸಮುದಾಯ ಭವನವಾರು ಹಾಗೂ ಇದಕ್ಕೆ ಬಿಡುಗಡೆಗೊಂಡ ಶಾಸಕರ ಹೆಸರು ಮತ್ತು ಮೊತ್ತದ ವಿವರ ನೀಡುವುದು ?

## ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರ ಬಗ್ಗೆ

**ಕ್ಯಾಪ್ಟನ್. ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೩೩ (೧೩೭೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಮಂಜೂರಾದ ಒಟ್ಟು ವೈದ್ಯರ ಸಂಖ್ಯೆ ಎಷ್ಟು;

(ಆ) ಆ ಪೈಕಿ, ಹಾಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು ;

(ಇ) ರಾಜ್ಯದ ವಿವಿಧ ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರ ಕೊರತೆಯಿದ್ದು, ಜನಸಾಮಾನ್ಯರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಪ್ರಧಾನಮಂತ್ರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡುವುದು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೩೬ (೧೬೦೪) ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರಧಾನಮಂತ್ರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ)ಯಲ್ಲಿ ಯಾವ ಖಾಯಿಲೆಗಳಿಗೆ ವಿಶೇಷ ಸೌಲಭ್ಯಗಳಿವೆ;

(ಆ) ಇಲ್ಲಿಗೆ ಸರ್ಕಾರ ಅನುಮತಿ ನೀಡಲಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಸದರಿ ಆಸ್ಪತ್ರೆಯನ್ನು ಪ್ರಾರಂಭಗೊಳಿಸಿದಾಗಿನಿಂದ ಎಷ್ಟು ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ ;

(ಈ) ಭರ್ತಿಯಾಗದೆ ಇರುವ ಹುದ್ದೆಗಳನ್ನು (ತಜ್ಞ ವೈದ್ಯರುಗಳನ್ನು) ಭರ್ತಿ ಮಾಡಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಆರ್ಥಿಕ ಮುಗ್ಗಟ್ಟಿನಿಂದ ಅಭಿವೃದ್ಧಿ ಆಗದ ಬೆಳಗಾವಿ ವೈದ್ಯಕೀಯ ಕಾಲೇಜು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೫೭ (೧೬೧೬) ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ಮೆಡಿಕಲ್ ಕಾಲೇಜಿನಲ್ಲಿ ಹೃದಯದ ಶಸ್ತ್ರ ಚಿಕಿತ್ಸೆ ಮಾಡುವ ಸೌಲಭ್ಯ ಇನ್ನೂ ಒದಗಿಸದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಮೆಡಿಕಲ್ ಕಾಲೇಜು ಆಸ್ಪತ್ರೆಯು ಆರ್ಥಿಕ ಮುಗ್ಗಟ್ಟಿನಿಂದಾಗಿ (ಬ್ರಿಟೀಷ್ ಕಾಲದ ಸಿವಿಲ್ ಆಸ್ಪತ್ರೆ) ಇನ್ನೂವರೆಗೂ ಎಷ್ಟೋ ವರ್ಷಗಳಿಂದ ಸುಣ್ಣ–ಬಣ್ಣ ಹಾಗೂ ಆಸ್ಪತ್ರೆ ನವೀಕರಣ, ಮೂತ್ರಾಲಯ–ಶೌಚಾಲಯ ನವೀಕರಣವಾಗದೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ರೋಗಿಗಳ ಜನ ಸಂಖ್ಯೆಗೆ ಅನುಗುಣವಾಗಿ ಸಾಮಾನ್ಯ ವಾರ್ಡುಗಳು ಮತ್ತು ಹೆರಿಗೆ ವಾರ್ಡುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಆಸ್ಪತ್ರೆ ಆರ್ಥಿಕ ಮುಗ್ಗಟ್ಟಿನಿಂದ ತೊಂದರೆಯಲ್ಲಿ ಇದ್ದು ಸ್ವಲ್ಪವೂ ಅಭಿವೃದ್ಧಿ ಆಗದೇ ಇರುವ ಆಸ್ಪತ್ರೆಯಾಗಿರುವುದರಿಂದ ಇದನ್ನು ಅಭಿವೃದ್ಧಿ ಪಡಿಸಲು ವಿಶೇಷ ಅನುದಾನವಾಗಿ ಐದುನೂರು ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಮತ್ತು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಕುರಿತು

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೮ (೧೫೬೭) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿಯ ಜಿಲ್ಲಾ ಆಸ್ಪತ್ರೆಯಲ್ಲಿ ಮೂಲಭೂತ ಸೌಲಭ್ಯಗಳಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸೂಕ್ತ ನಿರ್ವಹಣೆ ಇಲ್ಲದ ಕಾರಣ ಹಲವಾರು ಉಪಕರಣಗಳು ನಿಷ್ಪ್ರಯೋಜಕವಾಗಿದ್ದು, ಅವುಗಳನ್ನು ಕೂಡಲೇ ರಿಪೇರಿ ಮಾಡಿಸಿಕೊಡಲಾಗುವುದೇ ;

(ಇ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ ಬಡ ರೋಗಿಗಳಿಗೆ ಅದರಲ್ಲಿಯೂ ಮಹಿಳಾ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುವುದೇ ?

**ಗಂಗಾ ಕಲ್ಯಾಣ ಯೋಜನೆಯಲ್ಲಿ ೨೦೧೪–೨೦೧೫ ಹಾಗೂ ೨೦೧೫–೨೦೧೬ನೇ ಸಾಲಿನಲ್ಲಿ ಕೊರೆಸಿರುವ ಬೋರ್‌ವೆಲ್‌ಗಳ ಬಗ್ಗೆ**

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೯ (೧೫೯೪) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ೨೦೧೪ನೇ ಸಾಲಿನಿಂದ ೨೦೧೬ನೇ ಸಾಲಿನವರೆಗೆ ಕೊರೆಸಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು ;

(ಆ) ಎಷ್ಟು ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಹಾಗೂ ಮೋಟರ್ ಅಳವಡಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ೨೦೧೩ನೇ ಸಾಲಿನಿಂದ ೨೦೧೫ನೇ ಸಾಲಿನವರೆಗೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಕೊರೆಸಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು ; ಹಾಗೂ ಎಷ್ಟು ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಹಾಗೂ ಮೋಟರ್ ಅಳವಡಿಸಲಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

**ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುವ ಕುಣಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೦ (೧೨೬೬) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಉತ್ತರ ಕನ್ನಡ ಜಿಲ್ಲೆಯ ದಟ್ಟ ಕಾಡಿನಲ್ಲಿ ವಾಸಿಸುವ ಕುಣಬಿ ಜನಾಂಗದವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕುಣಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸದರಿ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು ?

## ಮೈಸೂರು ನಗರ ಸಾರಿಗೆಯ ಸುಧಾರಣೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೧ (೧೨೭೬) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೈಸೂರು ನಗರ ಸಾರಿಗೆಯಲ್ಲಿರುವ ಬಸ್ ಡಿಪೋಗಳ (ಘಟಕಗಳ) ಸಂಖ್ಯೆ ಎಷ್ಟು ; ಬಸ್‌ಗಳ ಸಂಖ್ಯೆ ಎಷ್ಟು ; ಸಾಮಾನ್ಯ ಮತ್ತು ವೋಲ್ವೋ ಬಸ್‌ಗಳನ್ನು ಒಳಗೊಂಡಂತೆ ಪ್ರತಿಯೊಂದು ಡಿಪೋಗಳಿಂದ ಚಾಲನೆ ಆಗುತ್ತಿರುವ ಮಾರ್ಗಗಳ ಸಂಖ್ಯೆ ಸುತ್ತುವಳಿಗಳ ಸಂಖ್ಯೆ ವಿವರ ಒದಗಿಸುವುದು;

(ಆ) ಮೈಸೂರು ನಗರ ಸಾರಿಗೆಗೆ ಈ ವರ್ಷ ಹೊಸದಾಗಿ ಬಸ್‌ಗಳನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಎಷ್ಟು ಬಸ್‌ಗಳನ್ನು ಒದಗಿಸಲಾಗುವುದು ;

(ಇ) ಚಾಮರಾಜನಗರಕ್ಕೆ ಪ್ರತ್ಯೇಕ ನಗರ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದೇ; ಈ ವರ್ಷ ಚಾಮರಾಜನಗರ ನಗರ ಸಾರಿಗೆಗೆ ಎಷ್ಟು ಬಸ್‌ಗಳನ್ನು ಹೊಸದಾಗಿ ಒದಗಿಸಲಾಗುವುದು ;

(ಈ) ಮೈಸೂರು ನಗರದ ವಿವಿಧ ಬಡಾವಣೆಗಳಿಂದ ಬೆಳಗಿನ ಜಾವ ೫ ಗಂಟೆಗೆ ರೈಲ್ವೆ ನಿಲ್ದಾಣ, ಗ್ರಾಮಾಂತರ ಬಸ್ ನಿಲ್ದಾಣ ತಲುಪುವಂತೆ ನಗರ ಸಾರಿಗೆ ಬಸ್‌ಗಳ ವ್ಯವಸ್ಥೆ ಮಾಡಲಾಗುವುದೇ ; ಅದೇ ರೀತಿ ರಾತ್ರಿ ೧೧.೦೦ ರವರೆಗೆ ವಿವಿಧ ಬಡಾವಣೆಗಳಿಗೆ ನಗರ ಸಾರಿಗೆ ಬಸ್‌ಗಳನ್ನು ಓಡಿಸುವ ವ್ಯವಸ್ಥೆ ಮಾಡಲಾಗುವುದೇ ?

## ೨೦೧೩–೧೪, ೨೦೧೪–೧೫ರಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಬಜೆಟ್‌ನಲ್ಲಿಟ್ಟ ಹಣದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೧೬೨ (೧೨೬೫) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ೨೦೧೩–೧೪, ೨೦೧೪–೧೫ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಹಣವೆಷ್ಟು ; ಈ ಹಣದಲ್ಲಿ ಎರಡು ವರ್ಷದಲ್ಲಿ ಎಷ್ಟು ಬಿಡುಗಡೆಯಾಗಿದೆ ; ಎಷ್ಟು ಖರ್ಚಾಗಿದೆ ; (ವರ್ಷವಾರು ವಿವರ ಒದಗಿಸುವುದು)

(ಆ) ಹಾವೇರಿ ಜಿಲ್ಲೆಯಲ್ಲಿರುವ ಸಮುದಾಯ ಭವನಗಳು ಎಷ್ಟು ; ಅವುಗಳ ನಿರ್ಮಾಣಕ್ಕಾಗಿ ಒದಗಿಸಲಾಗಿರುವ ಹಣ ಎಷ್ಟು ; ಪುನಃ ಕೋರಲಾಗಿರುವ ಮೊತ್ತ ಎಷ್ಟು ; ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ ? (ಭವನವಾರು ವಿವರ ಒದಗಿಸುವುದು)

## ಸ್ಮಾರ್ಟ್ ಯುನಿವರ್ಸಿಟಿ ಪರಿಕಲ್ಪನೆ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೩ (೧೨೬೬) ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿಯ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಜಾರಿಗೆ ತರಲು ಹೊರಟಿರುವ ಸ್ಮಾರ್ಟ್ ಯುನಿವರ್ಸಿಟಿ ಪರಿಕಲ್ಪನೆಯಿಂದ ಮೆಡಿಕಲ್ ವಿದ್ಯಾರ್ಥಿಗಳಿಗೆ ಹೊರೆ ಆಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸ್ಮಾರ್ಟ್ ಯುನಿವರ್ಸಿಟಿ ಪರಿಕಲ್ಪನೆ ಸೌಲಭ್ಯ ಪಡೆಯಲು ತಿಂಗಳಿಗೆ ಪ್ರತಿ ವಿದ್ಯಾರ್ಥಿಗೆ ನಿಗದಿಪಡಿಸಿದ ಶುಲ್ಕವೆಷ್ಟು ;

(ಇ) ಈಗಾಗಲೇ ವಿವಿಧ ರೂಪದಲ್ಲಿ ಶುಲ್ಕ ಭರಿಸಿರುವ ವಿದ್ಯಾರ್ಥಿಗಳಿಗೆ ಇನ್ನೊಂದು ಶುಲ್ಕದ ಹೊರೆ ಹೊರೆಸಿದಂತಲ್ಲವೆ ;

(ಈ) ಸದರಿ ಶುಲ್ಕವನ್ನು ಸರ್ಕಾರವೇ ಭರಿಸಲು ಕ್ರಮ ಕೈಗೊಳ್ಳುವ ವಿಚಾರ ಸರ್ಕಾರದ ಮುಂದೆ ಇದೆಯೇ ?

## ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳ ಬಳಿ ಮಾರಾಟ ನಿಷೇಧವಿರುವ ಪದಾರ್ಥಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೪ (೧೫೭೮) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳಿಂದ ಎಷ್ಟು ಮೀಟರ್ ದೂರದಲ್ಲಿ ಯಾವ ಯಾವ ಪದಾರ್ಥಗಳ ಮಾರಾಟವನ್ನು ನಿಷೇಧಿಸಲಾಗಿದೆ ; (ಸುತ್ತೋಲೆ ಹೊರಡಿಸಿದ್ದಲ್ಲಿ ಸುತ್ತೋಲೆ ಪ್ರತಿಯನ್ನು ಒದಗಿಸುವುದು)

(ಆ) ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳ ಬಳಿ ಮಾರಾಟವನ್ನು ನಿಷೇಧಿಸಿದ ಆಹಾರ ಪದಾರ್ಥಗಳ ಮಾರಾಟವನ್ನು ನಿಯಂತ್ರಿಸುವ ಮತ್ತು ಕ್ರಮ ಕೈಗೊಳ್ಳುವ ಅಧಿಕಾರವನ್ನು ಯಾವ ಯಾವ ಅಧಿಕಾರಿಗಳಿಗೆ ನೀಡಲಾಗಿದೆ ; ಅವರ ಅಧಿಕಾರ ವ್ಯಾಪ್ತಿಯೇನು ;

(ಇ) ಕಳೆದ ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳ ಬಳಿ ಮಾರಾಟ ನಿಷೇಧಿತ ಪದಾರ್ಥಗಳ ಮಾರಾಟ ಹಾಗೂ ದಾಸ್ತಾನು ಮೇಲೆ ದಾಖಲಾದ ಪ್ರಕರಣಗಳೆಷ್ಟು ; ಸದರಿ ಪ್ರಕರಣಗಳಲ್ಲಿ ತೆಗೆದುಕೊಳ್ಳಲಾದ ಕ್ರಮಗಳೇನು ? (ತಾಲ್ಲೂಕುವಾರು, ಪ್ರಕರಣವಾರು ವಿವರ ನೀಡುವುದು)

## ಬೆಂಗಳೂರು ನಗರದ ಟ್ರಾಫಿಕ್ ಸಮಸ್ಯೆ ಕುರಿತು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೧೬೫ (೧೫೯೦) ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದಲ್ಲಿ ಕಳೆದ ೨ ವರ್ಷಗಳಲ್ಲಿ ಪರವಾನಿಗೆ ಇಲ್ಲದ ಖಾಸಗಿ ಬಸ್ಸುಗಳು, ಮಾಕ್ಸಿ ಕ್ಯಾಬ್‌ಗಳು, ಓವರ್ ಲೋಡ್ ಸರಕು ಸಾಗಣೆ ವಾಹನಗಳು ಸಂಚರಿಸುತ್ತಿರುವುದನ್ನು ಸಾರಿಗೆ ಇಲಾಖೆ ತಪಾಸಣೆ ಮಾಡಿ, ದಂಡ ವಿಧಿಸಿರುವ ಪ್ರಕರಣಗಳೆಷ್ಟು ; (ವಿವರ ನೀಡುವುದು)

(ಆ) ನಗರದ ಟ್ರಾಫಿಕ್ ಸಮಸ್ಯೆ ಕಡಿಮೆ ಮಾಡಲು ಈ ವಾಹನಗಳ ಸಂಚಾರ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಸಾರಿಗೆ ಮತ್ತು ಟ್ರಾಫಿಕ್ ಪೋಲೀಸ್ ಅಧಿಕಾರಿಗಳ ಒಳ ಒಪ್ಪಂದ ಮತ್ತು ಮಾಮೂಲಿಗಳ ವಹಿವಾಟಿನಿಂದ ರಾಜಾರೋಷವಾಗಿ ಪರವಾನಿಗೆ ಇಲ್ಲದ ಖಾಸಗಿ ವಾಹನಗಳು, ಎಫ್.ಸಿ. ಇಲ್ಲದ ವಾಹನಗಳು ಮತ್ತು ಓವರ್ ಲೋಡ್‌ನ ಸರಕು ಸಾಗಾಣಿಕೆ ವಾಹನಗಳು ನಗರದಲ್ಲಿ ದಿನನಿತ್ಯ ಅತಿ ಹೆಚ್ಚು ಪ್ರಮಾಣದಲ್ಲಿ ಸಂಚರಿಸುತ್ತಾ, ನಗರದ ಟ್ರಾಫಿಕ್ ಸಮಸ್ಯೆ ಹೆಚ್ಚು ಮಾಡಿರುವುದು ಮತ್ತು ಸರ್ಕಾರಕ್ಕೆ ಬರಬೇಕಾಗಿರುವ ಹೆಚ್ಚುವರಿ ದಂಡ ವಸೂಲಿಯಲ್ಲಿ ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರಕರಣಗಳ ವಿವರ ನೀಡುವುದು)

(ಈ) ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಳಗಾವಿ. ಪಿ7, ಕಾ.ಸೂ. , ಪ್ರತಿಗಳು 1500